**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-18 (ಸಿಡಬ್ಲ್ಯೂ-22)**

ಸಾಕ್ಷಿದಾರರ ಹೆಸರು : ಸಂಗಪ್ಪ ಪಾಲಭಾವಿ

ತಂದೆಯ ಹೆಸರು : ಬಸಪ್ಪ

ವಯಸ್ಸು : **41** ವರ್ಷ

ಉದ್ಯೋಗ : ಪೋಲಿಸ್ ಇನ್ಸಪೇಕ್ಟರ್, ಉತ್ತರ ಸಂಚಾರ ಪೋಲಿಸ್ ಠಾಣೆ, ಹುಬ್ಬಳ್ಳಿ

ವಾಸಸ್ಥಳ : ಹುಬ್ಬಳ್ಳಿ

**ಸಾಕ್ಷಿಗೆ ಇಂದು ದಿನಾಂಕ :- 25/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ನವೆಂಬರ್ 2020 ರಿಂದ ಜನೇವರಿ 2023 ರವರೆಗೆ ವಿಜಯಪುರ ಗ್ರಾಮೀಣ ವೃತ್ತ ಪೋಲಿಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 17.02.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡು, ಪರಿಶೀಲಿಸಿ, ತನಿಖೆ ಮುಂದುವರೆಸಿರುತ್ತೇನೆ. ಚಾಸಾ-21 ರವರಿಗೆ ಆರೋಪಿಯನ್ನು ಪತ್ತೆ ಹಚ್ಚಿ ಹಾಜರು ಪಡೆಸುವಂತೆ ಸೂಚಿಸಿರುತ್ತೇನೆ. ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಚಾಸಾ-21 ರವರು ಆರೋಪಿಯನ್ನು ತಂದು ನನ್ನ ಮುಂದೆ ಹಾಜರು ಪಡೆಸಿದ್ದು, ಆತನನ್ನು ವಿಚಾರಿಸಿದಾಗ ಆತ ತನ್ನ ಹೆಂಡತಿಯನ್ನು ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು, ಆತನ ಸ್ವ -ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

3. ಚಾಸಾ-21 ರವರು ಆರೋಪಿಯನ್ನು ಹಾಜರು ಪಡೆಸುವ ಸಮಯದಲ್ಲಿ ವರದಿಯನ್ನು ನೀಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು

ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ಆರೋಪಿಯು ನಂತರ ನಮ್ಮನ್ನು ಮತ್ತು ಪಂಚರಾದ ಚಾಸಾ-4 ಮತ್ತು 6 ರವರನ್ನು ಕರೆದುಕೊಂಡು, ಆತನ ತೋಟದ ಮನೆಗೆ ಹೋಗಿದ್ದು, ಅಲ್ಲಿ ಆತ ತೋರಿಸಿದ ಜಾಗದಲ್ಲಿ ಪಂಚನಾಮೆಯನ್ನು ಸಂಜೆ 4.30 ರಿಂದ 5.30 ರವರೆಗೆ ಮಾಡಿರುತ್ತೇನೆ. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.22(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫೋಟೋಗಳನ್ನು ಮತ್ತು ಸ್ಥಳದ ಜಕಚ್ಚಾ ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ. ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.23 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು. ಫೋಟೋವನ್ನು ಈಗಾಗಲೇ ನಿ.ಪಿ.14 ಎಂದು ಗುರುತಿಸಿದ್ದು, ಸಾಕ್ಷಿ ನೋಡಿ ಗುರುತಿಸುತ್ತಾರೆ.

4. ನಂತರ ಠಾಣೆಗೆ ವಾಪಸ್ಸಾಗಿ ಆರೋಪಿಯ ವೈದ್ಯಕೀಯ ತಪಾಸಣೆ ಮಾಡಿಸಿ, ಆತನನ್ನು ಮಾನ್ಯ ನ್ಯಾಯಾಲಯಕ್ಕೆ ನ್ಯಾಯಾಂಗ ಬಂಧನದ ಅರ್ಜಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಅದೆ ದಿನ ಸಾಕ್ಷಿದಾರರಾದ ಚಾಸಾ-7 ರಿಂದ 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-7, 9, 10, 12 ಮತ್ತು 14 ರವರ ನನ್ನ ಮುಂದೆ ನಿ.ಪಿ.8 ರಿಂದ 12 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ಅದೇ ದಿನ ಚಾಸಾ-20 ರವರಿಂದ ಕಲಂ.65(ಬಿ) ಸಾಕ್ಷ್ಯಾಧೀನಿಮಯದಡಿ ಪ್ರಮಾಣ ಪತ್ರವನ್ನು ಪಡೆದುಕೊಂಡು, ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ.



5. ದಿ: 26.02.2022 ರಂದು ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.24 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-17 ರವರಿಗೆ ಮರಣೋತ್ತರ ಪರೀಕ್ಷಾ ವರದಿಯ ಪ್ರಕಾರ ಮರಣ ಕಾರಣದ ಅಂತಿಮ ಅಭಿಪ್ರಾಯವನ್ನು ನೀಡುವಂತೆ ಪತ್ರ ಮುಖೇನ ಕೇಳಿಕೊಂಡಿರುತ್ತೇನೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.25 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ಅದೇ ದಿನ ತಹಶೀಲ್ದಾರ ತಿಕೋಟಾ ಇವರಿಗೆ ಅಪರಾಧ ನಡೆದ ಸ್ಥಳದ ಪಹಣಿ ಪತ್ರಿಕೆಯನ್ನು ನೀಡುವಂತೆ ಪತ್ರಮುಖೇನ ಕೇಳಿಕೊಂಡಿರುತ್ತೇನೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.26(ಎ) ಎಂದು ಗುರುತಿಸಲಾಯಿತು.

6. ದಿ: 02.03.2022 ರಂದು ಚಾಸಾ-17 ರವರಿಂದ ಅಂತಿಮ ಅಭಿಪ್ರಾಯ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.27 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು. ದಿ: 03.03.2022 ರಂದು ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಚಾಸಾ-16 ರವರಿಗೆ

ಪತ್ರಮುಖೇನ ಕೇಳಿಕೊಂಡಿರುತ್ತೇನೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಗಾಲೇ ನಿ.ಪಿ.16 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು. ದಿ: 08.03.2022 ರಂದು ತಹಶೀಲ್ದಾರ ತಿಕೋಟಾ ಇವರಿಂದ ಘಟನಾ ಸ್ಥಳದ ಉತಾರೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.28 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.28(ಎ) ಎಂದು ಗುರುತಿಸಲಾಯಿತು.

7. ದಿ: 26.03.2022 ರಂದು ಚಾಸಾ-18 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ: 11.04.2022 ರಂದು ಚಾಸಾ-19 ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.20 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.20(ಬಿ) ಎಂದು ಗುರುತಿಸಲಾಯಿತು. ಅದೇ ದಿನ ನಿ.ಪಿ.17 ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ: 21.04.2022 ರಂದು ಮಾನ್ಯ 4 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ದಾಖಲಾಗಿದ್ದ UDR No.7/2022 ಕಲಂ.174(c) ಸಿ.ಆರ್.ಪಿ.ಸಿ.,ಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಮನವಿ ಪತ್ರಮುಖೇನ ನ್ಯಾಯಾಲಯಕ್ಕೆ ಹಾಜರು ಪಡೆಸಿ, ಈ ಪ್ರಕರಣದಲ್ಲಿ

ಅಳವಡಿಸಿಕೊಳ್ಳಲು ಕೋರಿಕೊಂಡಿರುತ್ತೇನೆ. ಸದರಿ ಮನವಿ ಪತ್ರ ಮತ್ತು ನಮೂನೆ ಸಂಖ್ಯೆ



142 ನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.29 ಮತ್ತು ನಿ.ಪಿ.30 ಎಂದು, ದೂರನ್ನು ನಿ.ಪಿ.31 ಎಂದು, ಹಾಗೂ ಶವ ಪರೀಕ್ಷೆಗಾಗಿ ಕಳುಹಿಸಿದ ನಮೂನೆ ಸಂಖ್ಯೆ: 146(1) ಮತ್ತು (2) ಮತ್ತು ಶವ ಮುಟ್ಟಿದ್ದ ಬಗ್ಗೆ ನೀಡಿದ ಸ್ವೀಕೃತಿ ಮತ್ತು ಮೃತಳ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.32 ರಿಂದ 35 ಎಂದು ಗುರುತಿಸಲಾಯಿತು. ನಿ.ಪಿ.29 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.29 (ಎ) ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದರಿಂದ ಮತ್ತು ಆರೋಪಿ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

8. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಆತನ ಮನೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-17 ರವರಿಂದ ಮರಣೋತ್ತರ ಪರೀಕ್ಷಾ ವರದಿ ಮತ್ತು ಅಂತಿಮ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲಿಯೇ ಸೃಷ್ಟಿಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ಮೃತಳ ಸಾವು ಹೃದಯಾಘಾತದಿಂದ ಆಗಿದ್ದರೂ ಸಹ ಸರಿಯಾಗಿ



ತನಿಖೆ ಮಾಡದೇ, ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-19 (ಸಿಡಬ್ಲ್ಯೂ- 06)**

ಸಾಕ್ಷಿದಾರರ ಹೆಸರು : ಮಳಸಿದ್ದ ಕನ್ನೂರ

ತಂದೆಯ ಹೆಸರು : ಹನಮಂತ

ವಯಸ್ಸು : **52** ವರ್ಷ

ಉದ್ಯೋಗ : ಕೂಲಿಕೆಲಸ

ವಾಸಸ್ಥಳ : ಅಥಾಲಟ್ಟಿ, ಇಂಡಿ

**ಸಾಕ್ಷಿಗೆ ಇಂದು ದಿನಾಂಕ :- 25/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ-4 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಪೋಲಿಸರು 4-5 ವರ್ಷಗಳ ಹಿಂದೆ ನಮ್ಮ ಅಕ್ಕನ ಮಗಳು ತೀರಿಕೊಂಡ ಬಗ್ಗೆ ಒಂದು ದಾಖಲೆಗೆ ಸಾಕ್ಷಿಯಾಗಿ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿ.ಪಿ.22 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.22(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.14 ರಲ್ಲಿ ತನ್ನನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ಮೃತ ಲಕ್ಷ್ಮೀಯ ಮಣ್ಣು ಮಾಡುವ ಸಮಯದಲ್ಲಿ ಪೋಲಿಸರು ತೆಗೆದುಕೊಂಡಿರುತ್ತಾರೆ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ದಿ: 17.02.2022 ರಂದು ಆರೋಪಿಯು ತೋರಿಸಿದ ಆತನ ಅಥಾಲಟ್ಟಿ ಗ್ರಾಮದ ತೋಟದ ಮನೆಯಲ್ಲಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಪೋಲಿಸರು ಸಂಜೆ 4.30 ರಿಂದ 5.30 ರವರೆಗೆ ನಿ.ಪಿ.22 ರಂತೆ ಪಂಚನಾಮೆ ಮಾಡಿ, ನಿ.ಪಿ.14 ರಂತೆ

ಪೋಟೋ ತೆಗೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹಾಜರಿದ್ದು, ನಾನು ನಿ.ಪಿ.22 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ</u>**

ಮೃತಳು ಹೃದಯಾಘಾತವಾಗಿ ಮೃತ ಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ನನಗೆ ನಮ್ಮ ಸ್ನೇಹಿತರು ಕರೆ ಮಾಡಿ, ಆಕೆಗೆ ಹಾವು ಕಡಿದಿರುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ಮೃತಳು ಹೇಗೆ ತೀರಿಕೊಂಡಿರುತ್ತಾಳೆ ಎಂದು ಸ್ಪಷ್ಟವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಪೋಲಿಸರು ನನ್ನನ್ನು ನಿಲ್ಲಿಸಿ ಪೋಟೋ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ- 20 (ಸಿಡಬ್ಲ್ಯೂ-04)**

ಸಾಕ್ಷಿದಾರರ ಹೆಸರು : ಗೀತಲ್ ಪೂಜಾರಿ

ತಂದೆಯ ಹೆಸರು : ಅಮೋಘಿ

ವಯಸ್ಸು : 47 ವರ್ಷ

ಉದ್ಯೋಗ : ಗೌಂಡಿ ಕೆಲಸ

ವಾಸಸ್ಥಳ : ಲೋಗಾಂವಿ,

**ಸಾಕ್ಷಿಗೆ ಇಂದು ದಿನಾಂಕ :- 25/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ-5 & 6 ರವರು ಪರಿಚಯ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ಪೋಲಿಸರು ನನ್ನನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪಂಚನಾಮೆಗೆ ಸಾಕ್ಷಿಯಾಗಿ ಕರೆದಿರುವುದಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸಾಕ್ಷಿಯು ನಿ.ಪಿ.05 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.05(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.6 ರಲ್ಲಿ ತನ್ನನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಯನ್ನು ಎಲ್ಲಿ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿ.ಪಿ.6 ನ್ನು ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ನೆನಪಿಲ್ಲ.

ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ದಾಖಲೆಯು ಮೃತಳ ಮೈಮೇಲೆ ಇದ್ದ ಬಟ್ಟೆ ಜಪ್ತು ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಪಡೆದುಕೊಂಡಿರುತ್ತಾರೆ ಎಂದು ನನಗೆ

ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ ಪಡೆಸಿಕೊಂಡಿರುವುದಿಲ್ಲ.

ಸಾಕ್ಷಿಯು ನಿ.ಪಿ.22 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.22(ಸಿ) ಎಂದು ಗುರುತಿಸಲಾಯಿತು. ನಿ.ಪಿ.14 ರಲ್ಲಿ ನಾನು ಕಂಡು ಬರುತ್ತಿದ್ದೆನೆ ಎಂದರೆ ಸರಿ. ಸದರಿ ಸಹಿಯನ್ನು ಎಲ್ಲಿ ಪಡೆದುಕೊಂಡಿರುತ್ತಾರೆ ಮತ್ತು ಪೋಟೋವನ್ನು ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ದಿ: 16.02.2022 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆವರೆಗೆ ಪೋಲಿಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಚಾಸಾ-12 ರವರು ತೋರಿಸಿದಂತೆ ಅಥಾಲಟ್ಟಿ ಗ್ರಾಮದ ಮೃತಳ ತೋಟದ ಮನೆಯಲ್ಲಿ ನಿ.ಪಿ.5 ರಂತೆ ಪಂಚನಾಮೆ ಮಾಡಿ, ನಮ್ಮ ಸಹಿಯನ್ನು ಪಡೆದುಕೊಂಡು, ನಿ.ಪಿ.6 ರಂತೆ ಪೋಟೋ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಬೆಳಿಗ್ಗೆ 9.00 ರಿಮದ 10.00 ಗಂಟೆವರೆಗೆ ನಿ.ಪಿ.7 ರಂತೆ ಪಂಚನಾಮೆ ಮಾಡಿ, ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಚಾಸಾ-20 ರವರು ಹಾಜರು ಪಡೆಸಿದ ಮೃತಳ ಮೈಮೇಲೆ ಇದ್ದ ನಾಲ್ಕು ಬಟ್ಟೆಗಳನ್ನು ಅಮಾನತ ಪಡೆಸಿಕೊಂಡು, ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿ: 17.02.2022 ರಂದು ಆರೋಪಿಯು ತೋರಿಸಿದ ಆತನ ಅಥಾಲಟ್ಟಿ ಗ್ರಾಮದ ತೋಟದ ಮನೆಯಲ್ಲಿ ನನ್ನ ಮತ್ತು ಚಾಸಾ-6 ರವರ ಸಮಕ್ಷಮ ಪೋಲಿಸರು ಸಂಜೆ 4.30 ರಿಂದ 5.30 ರವರೆಗೆ ನಿ.ಪಿ.22 ರಂತೆ ಪಂಚನಾಮೆ ಮಾಡಿ, ನಿ.ಪಿ.14 ರಂತೆ ಪೋಟೋ ತೆಗೆಸಿಕೊಂಡು, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**<u>ಎಸ್.ಸಿ.ನಂ.168/2022</u>**

**<u>ಪಿಡಬ್ಲ್ಯೂ-21 (ಸಿಡಬ್ಲ್ಯೂ-21)</u>**

ಸಾಕ್ಷಿದಾರರ ಹೆಸರು : ಗಿರಿಮಲ್ಲಪ್ಪ ಉಪ್ಪಾರ

ತಂದೆಯ ಹೆಸರು : ಶಂಕರ

ವಯಸ್ಸು : **35** ವರ್ಷ

ಉದ್ಯೋಗ : ಪಿಎಸ್ಐ, ಅಥಣಿ, ಬೆಳಗಾವಿ

ವಾಸಸ್ಥಳ : ಅಥಣಿ, ಬೆಳಗಾವಿ

**<u>ಸಾಕ್ಷಿಗೆ ಇಂದು ದಿನಾಂಕ :- 25/03/2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.</u>**

ನಾನು ಜೂನ 2021 ರಿಂದ ಜೂನ 2023 ರವರೆಗೆ ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 15.02.2022 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ಆತನ ಮಗಳಾದ ಲಕ್ಷ್ಮೀಬಾಯಿ ಗಂಡ ರವಿ ಜಾಲಮಟ್ಟಿ ಆಕೆಯ ಸಾವಿನ ಬಗ್ಗೆ ಸಂಶಯ ಇರುವುದಾಗಿ ದೂರು ನೀಡಿದ್ದು, ಅದನ್ನು ಸ್ವೀಕರಿಸಿ, ಅದೇ ದಿನ ಮಧ್ಯಾಹ್ನ 3.30 ಗಂಟೆಗೆ ಠಾಣಾ UDR No.7/2022 ರಂತೆ ಕಲಂ.174 (c) ಸಿ.ಆರ್.ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ಮತ್ತು ದಾಖಲಿಸಿಕೊಂಡ ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.1 ಮತ್ತು ನಿ.ಪಿ.30 ಎಂದು ಗುರುತಿಸಲಾಗಿವೆ. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.1(ಬಿ) ಮತ್ತು ನಿ.ಪಿ.30(ಎ) ಎಂದು ಗುರುತಿಸಲಾಯಿತು.

3. ನಂತರ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ-20 ರವರ ಮೂಲಕ ಶವವನ್ನು ವಿಜಯಪುರ ಜಿಲ್ಲಾ ಸರಕಾರಿ ಆಸ್ಪತ್ರೆಗೆ ತರಿಸಿಕೊಂಡಿರುತ್ತೇನೆ. ಅದೇ ದಿನ ಸಂಜೆ 5.00 ರಿಂದ 6.00 ಗಂಟೆವರೆಗೆ ವಿಜಯಪುರ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಮೃತಳ ಶವ ಪಂಚನಾಮೆಯನ್ನು ಚಾಸಾ-2 & 3 ರವರ ಸಮಕ್ಷಮ ಜರುಗಿಸಿರುತ್ತೇನೆ. ಶವ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆ ಕಾಲದಲ್ಲಿ ನಿ.ಪಿ.2 ರಂತೆ ಫೋಟೋವನ್ನು ತೆಗೆಸಿಕೊಂಡಿರುತ್ತೇನೆ. ಆ ಸಮಯಕ್ಕೆ ಚಾಸಾ-8, 11, 13, ಮತ್ತು 15 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಮೃತಳ ಮರಣದ ಕಾರಣ ತಿಳಿಯಲು ನಮೂನೆ ನಂ.146(1) ಮತ್ತು 146(2) ರ ಜೊತೆಗೆ ಮೃತಳ ಮರಣೋತ್ತರ ಪರೀಕ್ಷೆಯನ್ನು ನಡೆಸುವಂತೆ ಚಾಸಾ-17 ರವರಿಗೆ ಮನವಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿ.ಪಿ.32 ಮತ್ತು 33 ನ್ನು ನೋಡಿ ಗುರುರತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.32(ಎ) ಮತ್ತು ನಿ.ಪಿ.33(ಎ) ಎಂದು ಗುರುತಿಸಲಾಯಿತು.

4. ದಿ: 16.02.2022 ರಂದು ಚಾಸಾ-20 ರವರು ಠಾಣೆಗೆ ಹಾಜರಾಗಿ ಮೃತಳ ಮೈಮೇಲೆ ಇದ್ದ ನಾಲ್ಕು ಬಟ್ಟೆಗಳನ್ನು ನನ್ನ ಮುಂದೆ ಹಾಜರು ಪಡೆಸಿದ್ದು, ಅವುಗಳನ್ನು ಚಾಸಾ-4 & 5 ರವರ ಸಮಕ್ಷಮ ನಿ.ಪಿ.7 ರಂತೆ ಪಂಚನಾಮೆಯನ್ನು ಬೆಳಿಗ್ಗೆ 9.00 ರರಿಂದ 10.00 ರವರೆಗೆ ಜರುಗಿಸಿ ಅಮಾನತ ಪಡೆಸಿಕೊಂಡಿರುತ್ತೇನೆ. ನಿ.ಪಿ.7

ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಅಮಾನತ ಪಡೆಸಿಕೊಂಡಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

5. ಅದೇ ದಿನ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ ಅಪರಾಧ ನಡೆದ ಆರೋಪಿಯ ಮನೆಯಲ್ಲಿ ಚಾಸಾ-12 ರವರು ತೋರಿಸಿದ ಸ್ಥಳದಲ್ಲಿ ಪರಿಶೀಲಿಸಿ, ನಿ.ಪಿ.5 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿ.ಪಿ.5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಲಸಾಯಿತು. ಆ ಸಮಯದಲ್ಲಿ ನಿ.ಪಿ.6 ರಂತೆ ಫೋಟೋ ತೆಗೆಸಿಕೊಂಡಿರುತ್ತೇನೆ.

6. ದಿ: 17.02.2022 ರಂದು ಚಾಸಾ-1 ರವರು ಬೆಳಿಗ್ಗೆ 11.30 ಗಂಟೆಗೆ ಠಾಣೆಗೆ ಹಾಜರಾಗಿ ಆತನ ಮಗಳು ಕೊಲೆ ಆಗಿರುವುದಾಗಿ ಲಿಖಿತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿ, ಠಾಣಾ ಅಪರಾಧ ಸಂಖ್ಯೆ 35/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಮತ್ತು ನಾನು ದಾಖಲಿಸಿಕೊಂಡ ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.3 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.19 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಪ್ರಥಮ

ವರ್ತಮಾನ ವರದಿಯನ್ನು ಅದೇ ದಿನ ಚಾಸಾ-18 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಪ್ರಕರಣವು ಘೋರ ಗುನ್ನೆ ಆಗಿದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ಹಸ್ತಾಂತರಿಸಿರುತ್ತೇನೆ.

7. ನಂತರ ಚಾಸಾ-22 ರವರ ಮೌಖಿಕ ಆದೇಶದಂತೆ ಆರೋಪಿಯನ್ನು ತೊರವಿ ಗ್ರಾಮದಲ್ಲಿ ವಶಕ್ಕೆ ಪಡೆದು, ಮಧ್ಯಾಹ್ನ 2.30 ಗಂಟೆಗೆ ಚಾಸಾ-22 ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿ.ಪಿ.21 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.21(ಬಿ) ಎಂದು ಗುರುತಿಸಲಾಯಿತು.

8. ದಿ: 19.02.2022 ರಂದು ಘಟನಾ ಸ್ಥಳದ ಪಹಣಿ ಪತ್ರಿಕೆಯನ್ನು ತಿಕೋಟಾ ತಹಶೀಲ್ದಾರ ರವರಿಂದ ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಉತಾರೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.36 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

9. ದಿ:15.02.2022 ರಂದು ಶವ ಪರೀಕ್ಷಾ ಕಾಲಕ್ಕೆ ಕೊಲೆ ಪ್ರಕರಣ ದಾಖಲಾಗಿರಲಿಲ್ಲ ಎಂದರೆ ಸರಿ. ಶವ ಪರೀಕ್ಷಾ ಕಾಲದಲ್ಲಿ ನನಗೆ ಮೇಲ್ನೋಟಕ್ಕೆ ಅದು

ಕೊಲೆ ಎಂದು ಕಂಡು ಬರಲಿಲ್ಲ ಎಂದರೆ ಸರಿ. ದಿ: 15.02.2022 ರಂದು ಚಾಸಾ-1 ರವರು ಕೊಲೆ ಆಗಿರಬಹುದು ಎಂದು ಸಂಶಯ ವ್ಯಕ್ತ ಪಡಿಸಿ ದೂರು ನೀಡಿರುತ್ತಾರೆ. ಶವ ಪರೀಕ್ಷೆ ಸಮಯದಲ್ಲಿ ಮೇಲ್ನೋಟಕ್ಕೆ ಅದು ಕೊಲೆ ಪ್ರಕರಣದ ಎಂದು ಕಂಡು ಬರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಕುತ್ತಿಗೆಯ ಭಾಗದಲ್ಲಿ ಗಾಯದ ಗುರುತುಗಳು ಕಂಡು ಬರುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಗಾಯಗಳು ಯಾವ ರೀತಿ ಆಗಿರಬಹುದು ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಉಗುರಿನಿಂದ ಆದ ಗಾಯದ ಗುರುತುಗಳು ಕಂಡು ಬರುತ್ತಿದ್ದವು ಎಂದು ನುಡಿಯುತ್ತಾರೆ. ಬಟ್ಟೆಗಳಲ್ಲಿ ರಕ್ತದ ಕಲೆಗಳಿರಲಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಶವ ಪಂಚನಾಮೆ ಮಾಡಿರುವುದಿಲ್ಲ. ನಾನು ಆ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿ.

10. ಚಾಸಾ-1 ರವರು ದಿ:15.02.2022 ರಂದು ನೀಡಿದ ದೂರಿನಲ್ಲಿ ಹೃದಯಾಘಾತ ಅಥವಾ ಬೇರೆ ಯಾವುದೋ ಕಾರಣದಿಂದ ಆಕೆ ಮೃತ ಪಟ್ಟಿರಬಹುದು ಎಂದು ಸಂಶಯ ವ್ಯಕ್ತ ಪಡಿಸಿ ದೂರು ನೀಡಿದ್ದರು. ಸದರಿ ದೂರಿನಲ್ಲಿ ಆರೋಪಿ ಕೊಲೆ ಮಾಡಿರುತ್ತಾನೆ ಎಂದು ದೂರು ನೀಡಿರುವುದಿಲ್ಲ ಎಂದರೆ ಸರಿ. ಎರಡು ದಿನಗಳ ನಂತರ ನಾವೇ ಚಾಸಾ-1 ರವರನ್ನು ಕರೆಸಿಕೊಂಡು ಅವರ ಕಡೆಯಿಂದ ದೂರು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಚಾಸಾ-8, 11, 13, ಮತ್ತು 15 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಮೃತಳ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದು ನನ್ನ ತನಿಖಾ ಸಮಯದಲ್ಲಿ

ಕಂಡು ಬಂದರು ಸಹ ಆತನ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.